ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಡಿ ಎಸ್ ಇ ಆರ್ ಟಿ
DSERT
DEPARTMENT OF STATE EDUCATIONAL RESEARCH AND TRAINING
NO 4, 100 FT RING ROAD, BANASHANKARI 3RD STAGE BENGALURU - 085
E MAIL:dsertkar@gmail.com , Website: http://dsert.kar.nic.in
Phone : 080
26422372
26422373
26422374
Fax:26422377

ಸಂ/ಶಿ.ತ/ಡಿ.ಇಡಿ/ಬೋ.ಅ/ನಿ.ಸೇ.ತ/01 /2015-16 ದಿನಾಂಕ.14.03.2016

## ಸುತ್ತೋಲೆ

ವಿಷಯ:-ರಾಜ್ಯದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರುಗಳು ಆಢಳಿತ/ ಅಭಿವೃದ್ಧಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಡಿ.ಇಡಿ ಕಾಲೇಜುಗಳಲ್ಲಿ ಕಲಿಯುತ್ತಿರುವ ಪ್ರಶಿಕ್ಷಣಾರ್ಥಿಗಳಿಗೆ ಬೋಧನಾಭ್ಯಾಸ ಮತ್ತು ನಿಕಟಸೇವಾ ಪೂರ್ವ ತರಬೇತಿ ಚಟುವಟಿಕೆಗಳನ್ನು ಶಾಲೆಗಳಲ್ಲಿ ಕೈಗೊಳ್ಳಲು ಅನುಮತಿ ನೀಡುವುದರ ಕುರಿತು.

ಉಲ್ಲೇಖ:-1) NCTE.ನಿಯಮಾವಳಿ F-51-1/2014 Dated 28.11.2014.

ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಶಿಕ್ಷಕರ ಶಿಕ್ಷಣವು ಡಿಪ್ಲಮೋ ಇನ್ ಎಜುಕೇಶನ್ ಕೋರ್ಸ್ ಮೂಲಕ ಭಾವಿ ಶಿಕ್ಷಕರನ್ನು ತರಬೇತಿಗೊಳಿಸಲಾಗುತ್ತಿದೆ. ವಿದ್ಯಾರ್ಥಿ ಶಿಕ್ಷಕರು ಶೈಕ್ಷಣಿಕ ಸಿದ್ಧಾಂತ ಮತ್ತು ಶಾಲಾ ಆಚರಣೆಗಳನ್ನು ಅಭ್ಯಾಸ ಮಾಡುವುದು, ನಿಜವಾದ ಶಾಲಾ ಸನ್ನಿವೇಶದಲ್ಲಿ ನೈಜ ವಿದ್ಯಾರ್ಥಿಗಳೊಡನೆ ಮುಖಾಮುಖಿಯಾಗಿ ಒಡನಾಡುವ ಪ್ರತ್ಯಕ್ಷಾನುಭವಗಳು ಮೂಡಲು ಅನುವಾಗುವ ರೀತಿಯಲ್ಲಿ ಡಿ.ಇಡಿ ಪಠ್ಯಕ್ರಮವನ್ನು ರೂಪಿಸಲಾಗಿದೆ. ಉಲ್ಲೇಖದನುಸಾರ D.El.Ed -Appendix- 2 4(b,c&d) ನಲ್ಲಿ ಈ ಅನುಭವಗಳನ್ನು ನೀಡಲು ಪ್ರತಿ ವರ್ಷ ವಿದ್ಯಾರ್ಥಿ ಶಿಕ್ಷಕರು 38 ದಿನಗಳ ಬೋಧನಾಭ್ಯಾಸ ಮತ್ತು 38 ದಿನಗಳ ಕಾಲ ನಿಕಟಸೇವಾಪೂರ್ವ ತರಬೇತಿಗಳನ್ನು ಒಳಗೊಂಡ ಪಠ್ಯಕ್ರಮ ರೂಪಿಸಿದೆ.

ಪರಿಷ್ಕೃತ ಡಿ.ಇಡಿ ಪಠ್ಯಕ್ರಮದಲ್ಲಿ ಬೋಧನಾಭ್ಯಾಸದ ಪ್ರಾಯೋಗಿಕ ಪರೀಕ್ಷಾರ್ಥ ಪಾಠ ನೀಡುವುದರ ಬದಲಾಗಿ ವಿದ್ಯಾರ್ಥಿ ಶಿಕ್ಷಕರು ಮಾಡುವ ಅಭ್ಯಾಸಕ್ಕಾಗಿ ನಿಗದಿಪಡಿಸಿದ ಎಲ್ಲಾ ಪಾಠಗಳನ್ನು ಆಧರಿಸಿ ಬಾಹ್ಯ ಅಂಕಗಳನ್ನು ನೀಡುವುದಕ್ಕೆ ಅವಕಾಶ ಮಾಡಲಾಗಿದೆ. ಆದುದರಿಂದ ಸಂಬಂಧಿಸಿದ ಡಿ.ಇಡಿ ಕಾಲೇಜುಗಳ ಪ್ರಶಿಕ್ಷಕರು ಮತ್ತು ಸದರಿ ಶಾಲೆಯಲ್ಲಿ ವಿಷಯ ಶಿಕ್ಷಕರು (ಮೆಂಟರ್ ಟೀಚರ್) ಕಡ್ಡಾಯವಾಗಿ ಅಭ್ಯಾಸ ಪಾಠಗಳನ್ನು ವೀಕ್ಷಿಸಿ ಸಂಬಂಧಿಸಿದ ಪ್ರಶಿಕ್ಷಣಾರ್ಥಿಗಳಿಗೆ ಅಗತ್ಯ ಹಿಮ್ಮಾಹಿತಿ ಮತ್ತು ಮಾರ್ಗದರ್ಶನ ನೀಡುವುದು ಹಾಗು ಬಾಹ್ಯ ಮೌಲ್ಯಮಾಪನದ ಅಂಕಗಳನ್ನು ನೀಡಬೇಕಾಗಿದೆ.

ಆದುದರಿಂದ NCTE ಯಿಂದ ಮಾನ್ಯತೆ ಪಡೆದು ಆರಂಭಿಸಿರುವ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಡಿ.ಇಡಿ ಕಾಲೇಜುಗಳಲ್ಲಿ ದಾಖಲಾದ ವಿದ್ಯಾರ್ಥಿ ಶಿಕ್ಷಕರಿಗೆ ತಮ್ಮ ಜಿಲ್ಲೆಯಲ್ಲಿರುವ ಅಂಗೀಕೃತ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಕಿರಿಯ, ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿವಿಧ ಮಾಧ್ಯಮಗಳಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ಬೋಧನಾಭ್ಯಾಸ ಮತ್ತು ನಿಕಟಸೇವಾ ಪೂರ್ವ ತರಬೇತಿಗಳಿಗೆ ಕೋರಿಕೆ ಬಂದಲ್ಲಿ ಅನುಮತಿ ನೀಡಲು ಹಾಗು ಶಾಲಾ ಶಿಕ್ಷಕರು ಅಭ್ಯಾಸಪಾಠಗಳನ್ನು ಕಡ್ಡಾಯವಾಗಿ ವೀಕ್ಷಣೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲು ಹಾಗು ಜಿಲ್ಲೆಯ ಇತರೆ ಶೈಕ್ಷಣಿಕ ಮಾರ್ಗದರ್ಶಕ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಶಾಲೆಗಳಿಗೆ ಭೇಟಿ ನೀಡಿದಾಗ ಪ್ರಶಿಕ್ಷಣಾರ್ಥಿಗಳ ಬೋಧನಾಭ್ಯಾಸ ಮತ್ತು ನಿಕಟಸೇವಾ ಪೂರ್ವ ತರಬೇತಿ ಚಟುವಟಿಕೆಗಳಲ್ಲಿ ತೊಡಗಿರುವುದನ್ನು ಹಾಗು ಪಠ್ಯಕ್ರಮ ಸೂಚಿಸಿದ ಕ್ರಮದಲ್ಲಿ ಅಭ್ಯಾಸಗಳು ನಡೆಯುತ್ತಿರುವುದನ್ನು ಪರಿಶೀಲಿಸಲು ಹಾಗು ಕ್ರಮಬದ್ಧವಾಗಿ ನಡೆಯುವುದನ್ನು ಖಾತ್ರಿಪಡಿಸಲು ಸೂಚಿಸಿ ಸಂಬಂದಿಸಿದ ಬಿ.ಇ.ಒ ಮತ್ತು ಶಾಲೆಗಳಿಗೆ ಜ್ಞಾಪನ ನೀಡುವುದು.

ಸದರಿ ಜ್ಞಾಪನಾ ಆದೇಶವನ್ನು ಪ್ರತಿ ವರ್ಷಕ್ಕೆ ಕೇಳುವುದು ಸಮಸ್ಯೆಯಾಗುವುದರಿಂದ ಖಾಯಂ ಆಗಿ ಶಾಲೆಗಳನ್ನು ಡಿ.ಇಡಿ ಕಾಲೇಜುಗಳಿಗೆ ಟ್ಯಾಗ್ ಮಾಡಿ ಅನುಮತಿ ನೀಡುವುದು.

(ಜಯಕುಮಾರ. ವಿಸ್)
ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಬೆಂಗಳೂರು.-85

ರಿಗೆ,

1) ರಾಜ್ಯದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು ಆಢಳಿತ ಮತ್ತು ಅಭಿವೃದ್ಧಿ ಇವರಿಗೆ ಮುಂದಿನ ಕ್ರಮಕ್ಕಾಗಿ